ಶಿಗ್ಗಾಂ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಲೋಕೋಪಯೋಗಿ ರಸ್ತೆಗಳನ್ನು ಡಾಂಬರು ಮಾಡುವುದು.

ಪ್ರಶ್ನೆ ಸಂಖ್ಯೆ ೩೧೧ (೨೬೯) ಶ್ರೀ ಎಂ. ಎಂ. ನಡಾಫ್ (ಶಿಗ್ಗಾಂ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ.—

ಅ) ಶಿಗ್ಗಾಂ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಕಳೆದ ಐದು ವರ್ಷಗಳ ಅವಧಿಯಲ್ಲಿ ಡಾಂಬರು ಮಾಡಿದ ರಸ್ತೆಗಳ ಸಂಖ್ಯೆಯ ವರ್ಷವಾರು ಮತ್ತು ತಾಲ್ಲೂಕವಾರು ಮಾಹಿತಿ ಹಾಗೂ ಪ್ರತಿಯೊಂದು ರಸ್ತೆಯ ಉದ್ದವನ್ನು ದಯವಿಟ್ಟು ಒಪ್ಪಿಸುವುದು;

ಆ) ಪ್ರತಿಯೊಂದು ತಾಲ್ಲೂಕಿನಲ್ಲೂ ಕನಿಷ್ಟ ಐದು ಕಿ. ಮೀಟರುಗಳ ರಸ್ತೆಯನ್ನು ಡಾಂಬರು ಮಾಡಬೇಕೆಂದು ಸರ್ಕಾರದವರು ಏನಾದರೂ ತೀರ್ಮಾನವನ್ನು ತೆಗೆದು ಕೊಂಡಿದ್ದಾರೆಯೇ ;

ಇ) ಶಿಗ್ಗಾಂ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಹಲವು ಪ್ರಮುಖ ಲೋಕೋಪಯೋಗಿ ಇಲಾಖೆಯ ರಸ್ತೆಗಳನ್ನು ಡಾಂಬರು ಮಾಡಲು ಸರ್ಕಾರದವರು ತೆಗೆದು ಕೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—

ಅ) ಶಿಗ್ಗಾಂ ತಾಲ್ಲೂಕ — ೧೧ ರಸ್ತೆಗಳು
ಸವಣೂರು ತಾಲ್ಲೂಕ — ೮ ರಸ್ತೆಗಳು

ವರ್ಷವಾರು, ತಾಲ್ಲೂಕುವಾರು ಹಾಗೂ ರಸ್ತೆಗಳ ಉದ್ದ ಈ ಕೆಳ ಕಂಡಂತಿದೆ,

ತಾಲ್ಲೂಕ್ ಹೆಸರು	೧೯೭೮–೭೯ ರಸ್ತೆಗಳ–ಉದ್ದ ಸಂಖ್ಯೆ ಕಿ ಮಿ.	೧೯೭೯-೮೦ ರಸ್ತೆಗಳ–ಉದ್ದ ಸಂಖ್ಯೆ ಕಿ.ಮಿ.	೧೯೮೦–೮೧ ರಸ್ತೆಗಳ–ಉದ್ದ ಸಂಖ್ಯೆ ಕಿ.ಮಿ.	೧೯೮೧–೮೨ ರಸ್ತೆಗಳ–ಉದ್ದ ಸಂಖ್ಯೆ ಕಿ.ಮಿ.	೧೯೮೨–೮೩ ರಸ್ತೆಗಳ-ಉದ್ದ ಸಂಖ್ಯೆ ಕಿ.ಮೀ
ಶಿಗ್ಗಾಂ	—	೧ ೩.೦	೪ ೪.೪	೧ ೨.೦	೪ ೫.೦
ಸವಣೂರು	—	೨ ೧.೬	೩ ೪.೮	೪೨ ೩.೦	೧ ೨.೨
ಒಟ್ಟು		೪ ೪.೬	೭ ೮.೨	೩ ೫.೦	೫ ೭.೦

ಆ) ಇಲ್ಲಾ.

ಇ) ಇದನ್ನು ಹಂತ ಹಂತವಾಗಿ ಹಣದ ಲಭ್ಯತೆಯನ್ನು ಅನುಸರಿಸಿ ತೆಗೆದುಕೊಳ್ಳಲಾಗುವುದು.

ಮನವಿಗಳು

ಶ್ರೀ ಪಂಪಾವತಿ.—ಸ್ವಾಮಿ, ನಾನು ನೋಟೀಸ್ ಕೊಟ್ಟಿಲ್ಲ, ೮ ದಿವಸವಾಯಿತು. ಖಾಸಗಿ ಶಾಲೆಗಳ ಶಿಕ್ಷಕರು ಉಪವಾಸ ಸತ್ಯಾಗ್ರಹ ಕೂತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಇಲ್ಲಿಯೇ ಇದ್ದಾರೆ. ಸರ್ಕಾರ ಕೊಡುವಂಥ ಹಣ ಅವರಿಗೆ ನೇರವಾಗಿ ಮುಟ್ಟುತ್ತಿಲ್ಲ. ಖಾಸಗೀ ಶಾಲೆಗಳವರು ಮೋಸ ಮಾಡುತ್ತಿದ್ದಾರೆ. ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ. ಅಲ್ಲಿ ಕೆಲಸ ಮಾಡುವಂಥ ಶಿಕ್ಷಕರಿಗೆ ಅನೇಕ ರೀತಿಯ ಕಿರುಕುಳವನ್ನು ಕೊಡುತ್ತಿದ್ದಾರೆ. ಕೆಲಸದಿಂದ ತೆಗೆದುಹಾಕಿದ್ದಾರೆ, ಇಬ್ಬರು ಹೆಣ್ಣುಮಕ್ಕಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಖಾಸಗೀ ಶಾಲೆಗಳಲ್ಲಿ ಕೆಲಸ ಮಾಡುವಂಥ ಶಿಕ್ಷಕರಿಗೆ ನೇರವಾಗಿ ಹಣ ಮುಟ್ಟುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—೩೩ ರಲ್ಲಿ ಬಹಳ ಜನ ಸದಸ್ಯರು ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಹೀರೋಜಿ ವಿ.ಎಸ್. ಲಾಡ್.—ಮಾನ್ಯ ಅಧ್ಯಕ್ಷರೇ ನಾನು ೫೦ ಪ್ರಶ್ನೆ ಕೊಟ್ಟಿದ್ದೇನೆ. ಒಂದೇ ಒಂದು ಪ್ರಶ್ನೆ ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನಾನು ಕೂಡ ೩೩ ರ ಕೆಳಗೆ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ತಾವು ಕೇಳಿದ ವಿಚಾರವನ್ನು ಮಾನ್ಯ ಸದಸ್ಯರಾದ ರಾಂದೇವರು ಕೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್. —ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಇವತ್ತು ಬೆಂಗಳೂರು ನಗರದಲ್ಲಿ ಸುಮಾರು ೨೫,೦೦೦ ಕಾರ್ಮಿಕರು ಕಟ್ಟಡ ಕಟ್ಟುವಂಥ ಕೆಲಸದಲ್ಲಿ ನಿರತರಾಗಿದ್ದಾರೆ. ಈ ಒಂದು ವರ್ಗಕ್ಕೂ ಮಿನಿಮಮ್ ವೇಜಸ್ ಕೊಡಬೇಕೆಂದು ಸುಪ್ರೀಂಕೋರ್ಟು ತೀರ್ಮಾನ ಮಾಡಿದೆ. ಸರ್ಕಾರದವರು ಇತ್ತೀಚೆಗೆ ಬಹು ಅಂತಸ್ತಿನ ಕಟ್ಟಡಗಳನ್ನು ಕಟ್ಟಬಾರದೆಂದು ಆಜ್ಞೆ ಹೊರಡಿಸಿರುವುದರಿಂದ ಅವರೆಲ್ಲಾ ಇವತ್ತು ಬೀದಿಪಾಲಾಗಿದ್ದಾರೆ.

ಅಧ್ಯಕ್ಷರು.—ನಿನ್ನೆ ಚರ್ಚೆಗೆ ಉತ್ತರ ಹೇಳಿದ್ದಾರೆ. ಇದು ಮಿಳಿ ರಲ್ಲಿ ಬರುವುದಿಲ್ಲ.

SRI M. S. KRISHNAN.—There is difference between what the Hon'ble Member S i P Ramdev has said and what I am saying I think theHon'b'e Chief Minister knows about the decision of the Supreme Court in regard to building construction workers. ಅವರ ಒಂದು ಕೆಕ್ಕೂ ರಿಟಿ ದೃಷ್ಟಿಯಿಂದ ಕರ್ನಾಟಕ ರಾಜ್ಯದಲ್ಲಿ ಆ ಒಂದು ಕಾನೂನನ್ನು ಜಾರಿಗೆ ತರುತ್ತೀರಾ ? ಇವತ್ತು ಕಟ್ಟಡಗಳಲ್ಲಿ ಕೆಲಸ ಮಾಡುವಂಥ ಕಾರ್ಮಿಕರು ಕೆಲಸ ಇಲ್ಲದೇ, ಊಟ ಇಲ್ಲದೇ ತೊಂದರೆ ಪಡುತ್ತಿದ್ದಾರೆ. ಕಾನೂನು ತರುತ್ತೇವೆಂದು ಆಶ್ವಾಸನೆ ಕೊಟ್ಟರೆ ನಾವು ಕೂಡ ಸಂತೋಷ ಪಡುತ್ತೇವೆ.

ಶ್ರೀ ಎಂ. ಚಂದ್ರಶೇಖರ್.—ಸಭ್ಯಕ್ಕೆ ಇಲ್ಲಿ ಆದು ಇಲ್ಲದೇ ಇರುವುದರಿಂದ

(ಗೊಂದಲ)

ಶ್ರೀ ಎಸ್. ಸೂರ್ಯನಾರಾಯಣರಾವ್.—ಕಾನೂನು ಜಾರಿಗೆ ತರುವುದು ತಡವಾಗುತ್ತದೆ. ಲೋಕೋಪಯೋಗಿ ಮಂತ್ರಿಯವರು ಇಲ್ಲಿಯೇ ಇದ್ದಾರೆ ಮಾನ್ಯ ಮಂತ್ರಿಯವರು ಇದ್ದಾರೆ. ಅವರಿಗೆ ಪರಿಹಾರ ಏನಾದರೂ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಇವತ್ತು ಅವರು ನಿರುದ್ಯೋಗಿಗಳಾಗಿ ಬೀದಿಯಲ್ಲಿದ್ದಾರೆ.

ಅಧ್ಯಕ್ಷರು. —ಸೂರ್ಯನಾರಾಯಣರವ್ ಅವರೇ, ಇದರ ಬಗ್ಗೆ ಚರ್ಚೆಯಾಗಿದೆ. ನೋಟೀಸ್ ಕೊಡದೇ ತಾವು ಮಾತನಾಡಿದರೆ ಹೇಗೆ ?

ಶ್ರೀ ಎಸ್. ಸೂರ್ಯನಾರಾಯಣರಾವ್.—ಮಂತ್ರಿಮಂಡಲ ಪೂರ್ತಿ ಇಲ್ಲೇ ಇದೆ. ಉತ್ತರ ಹೇಳಲಿ.

ಶ್ರೀ ಎಂ ಚಂದ್ರಶೇಖರ್.—ಅಧ್ಯಕ್ಷರೆ, ಮೊನ್ನೆಯ ದಿವಸ ಗಂಗಾರಾಮ್ ಬಿಲ್ಡಿಂಗ್ ದುರಂತ ಆದಮೇಲೆ ಅದೇ ರೀತಿ ಅನೇಕ ಕಟ್ಟಡಗಳ ನಿರ್ಮಾಣ ಹಂತದಲ್ಲಿದೆ. ಈ ಮುನ್ನೆಚ್ಚರಿಕೆಯ ಅಭಿಪ್ರಾಯದ ಪ್ರಕಾರ ಈಗ ಆಗುತ್ತಿರುವ ಕಟ್ಟಡಗಳ ನಿರ್ಮಾಣ ಯಾವರೀತಿ ಆಗುತ್ತಿದೆ, ಸುರಕ್ಷಿತವಾಗಿ ಕೆಲಸ ಆಗುತ್ತಿದೆಯೇ ಇಲ್ಲವೇ ಎಂದು ಪರಿಶೀಲನೆಯ ಮಾಡಿದ ಮೇಲೆ ಸರ್ಕಾರ ಒಂದು ಸಮಿತಿ ಮಾಡಿದೆ. ಆ ಸಮಿತಿ ತಾಂತ್ರಿಕ ವಿಚಾರದಲ್ಲಿ ಸ್ಟ್ರಕ್ಚರಲ್ ಇಂಜಿನಿಯರಿಂಗ್ ಬಗ್ಗೆ ಅವರು ಉಪಯೋಗ ಮಾಡತಕ್ಕ ಸಾಮಗ್ರಿಗಳು ಸರಿ ಇದೆಯೇ, ಇಲ್ಲವೇ ನೋಡಿ ವರದಿ ಕೊಡಬೇಕೆಂದು ಸಮಿತಿ ನೇಮಕ ಮಾಡಿದೆ. ಈ ಬಿಲ್ಡರ್ಸ್ ಕಂಟ್ರಾಕ್ಟರ್ಸ್ ಬಂದು ಸಾವಿರಾರು ಜನರಿಗೆ ಕೆಲಸ ಇಲ್ಲದಂತಾಗಿದೆ ಎಂದು ಹೇಳಿದರು. ಆದಷ್ಟು ತೀವ್ರವಾಗಿ ಸಮಿತಿಯವರು ಹೋಗಿ ಪರಿಶೀಲನೆ ಮಾಡಲಿಕ್ಕೆ ಹೇಳಿದ್ದೇವೆ. ಪ್ರಾರಂಭವಾಗುತ್ತಿರುವ ಕಟ್ಟಡಗಳಿಗೆ ಏತಕ್ಕೆ ತಡೆ ಎಂದು ಕೇಳಿದ್ದಾರೆ. ಅದರ ಬಗ್ಗೆ ಕಂಡಿತ ಮಾತನಾಡುತ್ತೇವೆ. ನಂತರ ಅದರ ಮೇಲೆ ಕ್ರಮ ತೆಗೆದುಕೊಳ್ಳುವುದು ಆಗುತ್ತದೆ, ಈ ಮಧ್ಯೆ ಒಂದು ದೊಡ್ಡ ಪ್ರಮಾಣದ ಕಾರ್ಮಿಕರಿಗೆಲ್ಲ ತೊಂದರೆಯಾಗಿ ಮಧ್ಯೆ ಬರುವ ಅಡೆತಡೆಗಳಿಗೆ, ಅಂದರೆ ಮಳೆ ಬಂದರೆ ನಿಲ್ಲಿಸುತ್ತಾರೆ. ಅದೇ ತರಹ ಇಲ್ಲಿಯೂ ಆಗಿದೆ. ಆ ಸಮಿತಿ ಏನಿದೆ ಅವರು ಕಂಟ್ರಾಕ್ಟರ್ಸ್ ಅಸೋಸಿಯೇಷನ್ ಜೊತೆ ಮಾತನಾಡುತ್ತಾರೆ.

(ಗೊಂದಲ)

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಅಧ್ಯಕ್ಷರೆ, ಲಿಂಗಸುಗೂರಿನಲ್ಲಿ ಸುಮಾರು ೧೨ ದಿವಸದಿಂದಲೂ ವಿದ್ಯಾರ್ಥಿಗಳು, ನಾಗರಿಕರು ಸತ್ಯಾಗ್ರಹ ಕುಳಿತ್ತಿದ್ದಾರೆ.

ಶ್ರೀ ಎಂ ಎಸ್ ಕೃಷ್ಣನ್.—ಅಧ್ಯಕ್ಷರೆ, ಈಗ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರು ಆದರೆ ಅವರು ನಾನು ಕೇಳಿದ್ದಕ್ಕೆ ಮಾತ್ರ ಕೊಡಲಿಲ್ಲ.

ಅಧ್ಯಕ್ಷರು.—ಸುಪ್ರೀಮ್ ಕೋರ್ಟ್ ಡಿಸಿಷಿನ್ ಬಗ್ಗೆ.

Sri M. S. KRISHNAN.—With regard to the Supreme Court decision and the enactment of the decision therein...ಈ ಒಂದು ಆ್ಯಪೆಕ್ಟ್‌ನಲ್ಲಿ ವರ್ಕರ್ಸ್‌ಗೆ ತಕ್ಷಣ ಏನಾದರೂ ಅನುಕೂಲ ಮಾಡಿಕೊಡಬೇಕೆಂದು ಹೇಳಿದೆ.

ಶ್ರೀ ಎನ್. ಸೂರ್ಯನಾರಾಯಣರಾವ್.—ಅಧ್ಯಕ್ಷರೆ, ವೋಟಿಂಗ್ ಕರೆದು ಆಪಿಲ್ ಮಾಡ ಬಹುದು. ಫ್ಯಾಕ್ಟರಿಗಳಲ್ಲಿ ಲೇ ಆಫ್ ಮಾಡಿದರೆ ಸಂಬಳ ಕೊಡುತ್ತಾರೆ.

ಶ್ರೀ ಎಂ. ಚಂದ್ರಶೇಖರ್.—ಸಮಿತಿ ಸದಸ್ಯರು ಅದರ ಬಗ್ಗೆ ತೀರ್ಮಾನ ಮಾಡುತ್ತಾರೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಮಾಡಿ ಕುಳಿತುಕೊಳ್ಳಬೇಕು.

ಶ್ರೀ ಪಂಪಾಪತಿ —ಅಧ್ಯಕ್ಷರೆ, ಇಲ್ಲಿ ಉಪವಾಸ ಕುಳಿತ್ತಿದ್ದಾರೆ.

Mr SPEAKER.—We ars unnecessarily dragging the time of the House. I shall not allow. This to continue.

ಶ್ರೀ ಹಿರೋಜಿ ವಿ.ಎಸ್. ಲಾಡ್.—ಅಧ್ಯಕ್ಷರೆ...

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಅಧ್ಯಕ್ಷರೆ, ಲಿಂಗಸುಗೂರಿನಲ್ಲಿ ನಾಲ್ಕು ಡಿಪ್ಯಾಂಡ್‌ಗಳ ಬಗ್ಗೆ ಅಲ್ಲಿಯ ವಿದ್ಯಾರ್ಥಿಗಳು, ನಾಗರೀಕರು ಸತ್ಯಾಗ್ರಹ ಮಾಡುತ್ತಿದ್ದಾರೆ. ಅಲ್ಲಿಯ ಪ್ರಿನ್ಸಿಪಾಲರ ವರ್ಗಾವಣೆಯ ಬಗ್ಗೆ ಡಿಗ್ರಿ ಕಾಲೇಜಿನ ಉಪಕರಣಗಳ ಬಗ್ಗೆ ಹನ್ನೆರಡು ದಿವಸದಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳಿಗೆ ನಾನು ನಾಲ್ಕಾರು ಪತ್ರಗಳನ್ನು ಬರೆದರೂ ಅವರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ದಿನಾಂಕ ೨೬-೩-೧೯೬೩ ರಿಂದ ೨೫-೮-೧೯೬೩ರ ವರೆಗೆ ನಾನು ಮಾನ್ಯ ಮಂತ್ರಿಗಳಿಗೆ ಸಾಕಷ್ಟು ಪತ್ರಗಳನ್ನು ಬರೆದಿದ್ದೇನೆ. ಆದರೆ ಅವರು ಇದುವರೆಗೆ ಯಾವ ಕ್ರಮ ತೆಗೆದುಕೊಂಡಿಲ್ಲ.

(ಗೊಂದಲ)

ಶ್ರೀ ಹಿರೋಜಿ ವಿ. ಎಸ್. ಲಾಡ್. ಅಧ್ಯಕ್ಷರೆ, ನಾನು ಸ್ವಲ್ಪ ವೇಳೆಲಿಕ್ಕೆ ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಪಂಪಾಪತಿ.—ಅಧ್ಯಕ್ಷರೆ, ನಾನು ನೋಟೀಸ್ ಕೊಟ್ಟು ೮ ದಿವಸ ಆಯಿತು. ಅಲ್ಲಿ ಉಪವಾಸ ಕುಳಿತ್ತಿದ್ದಾರೆ. ಅವರು ಸಾಯುವ ಸ್ಥಿತಿಯಲ್ಲಿದ್ದಾರೆ. ಸರ್ಕಾರ ಕೋಟ್ಯಾಂತರ ರೂಪಾಯಿ ಗಳ ಹಣ ಕೊಡುತ್ತಿದೆ.

Mr. SPEAKER.—It shall not go on record.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಲಿಂಗಸುಗೂರಿಗೆ ಬಂದಾಗ ನಾಲ್ಕು ಡಿಪ್ಯಾಂಡ್‌ಗಳ ಬಗ್ಗೆ ಸರ್ಕಾರ ತೀವ್ರಗತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳಿದರು. ಪ್ರಿನ್ಸಿಪಾಲರನ್ನು ಟ್ರಾನ್ಸ್‌ಫರ್ ಮಾಡಲಿಕ್ಕೆ ತೊಂದರೆ ಏನು ? ೬ ತಿಂಗಳ ಹಿಂದೆ ಬಾಗಲಕೋಟೆಯಲ್ಲಿ ಸಸ್ಪೆಂಡ್‌ನಲ್ಲಿದ್ದ ಪ್ರಿನ್ಸಿಪಾಲ್‌ನ್ನು ತಂದು ಅಲ್ಲಿಗೆ ಹಾಕಿದ್ದಾರೆ. ಅವರನ್ನು ತೀವ್ರಗತಿಯಲ್ಲಿ ವರ್ಗಾವಣೆ ಮಾಡಬೇಕು. ಮತ್ತು ಅಲ್ಲಿಗೆ ಬೇಕಾಗತಕ್ಕ ಶಿಕ್ಷಕರನ್ನು ತುಂಬಿಕೊಡಬೇಕು. ಅಲ್ಲಿ ಈ ನಾಲ್ಕು ಡಿಪ್ಯಾಂಡುಗಳು ಏನಿವೆ ಅವುಗಳ ಬಗ್ಗೆ ಸರ್ಕಾರ ಉತ್ತರ ಕೊಟ್ಟು, ಅಲ್ಲಿ ನಡೆಯುತ್ತಿರುವ ಸತ್ಯಾಗ್ರಹ ನಿಲ್ಲುವಂತೆ ಮಾಡಬೇಕು ಮುಖ್ಯ ಮಂತ್ರಿಗಳಾಗಲಿ, ಅಥವಾ ಯಾರೋ ಒಬ್ಬರು ಮಂತ್ರಿಗಳು ಜವಾಬ್ದಾರಿಯಿಂದ ಮಾಡುತ್ತೇವೆಂದು ಹೇಳಬೇಕು. ಏಕೆಂದರೆ, ಇಲ್ಲಿ ೬ಕ್ಷಣ ಮಂತ್ರಿಗಳು ಇಲ್ಲ. ಅವರ ಮನೆಗೆ ಹೋದರೆ ನಮ್ಮ ಪರಿಚಯ ಕೇಳುತ್ತಾರೆ. ಅವರಿಗೆ ೫-೬ ಲೆಟರ್ ಬರೆದರೂ ಉತ್ತರ

ಬರುತ್ತಿಲ್ಲ. ಅವರಿಗೆ ಇವರಿಗೆ ಏನು ಸಂಬಂಧ ಎಂದು ಗೊತ್ತಾಗುತ್ತಿಲ್ಲ. ಏನು ಕ್ರಮ ತೆಗೆದು ಕೊಳ್ಳುತ್ತಾರೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಹಿರೋಜಿ ವಿ ಎಸ್. ಲಾಡ್... ಅಧ್ಯಕ್ಷರೆ, ನನಗೆಮಾತನಾಡಲಿಕ್ಕೆ ಅವಕಾಶ ಕೊಡವೆ ಇರುವುದರಿಂದ ನಾನು ಸಭಾತ್ಯಾಗ ಮಾಡುತ್ತೇನೆ

(ಮಾನ್ಯ ಹಿರೋಜಿ ವಿ.ಎನ್ ಲಾಡ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಎಸ್. ಪಿ. ಗಂಗಾಧರಪ್ಪ.—ಅಧ್ಯಕ್ಷರೆ, ತಿಪಟೂರು ಟೌನ್ ಮಧ್ಯದಲ್ಲಿ ಪಾರಕ್ಕೆ ಒಂದು ಸಾರಿ, ೧೫ ದಿವಸಕ್ಕೆ ಒಂದು ಸಾರಿ ತಿಂಗಳಿಗೊಂದು ಸಾರಿ ಸಾಯುತಕ್ಕದ್ದು ನಡೆಯುತ್ತಿದೆ ಹೋದ ತಿಂಗಳು ಒಂದು, ಈ ತಿಂಗಳು ಒಂದು ಸ್ಪಾಟ್‌ಡೆತ್ ಆಗಿದೆ. ಅಲ್ಲಿ ಎರಡು ಬಸ್ಸುಗಳು ಒಂದಕ್ಕೊಂದು ಎದುರಿಗೆ ಒಂದಾಗಿ ಅಲ್ಲಿ ಜನ ತಿರುಗಾಡಲಿಕ್ಕೆ ಆಗುವುದಿಲ್ಲ. ಅಲ್ಲಿ ಒಂದು ಡಿವಿಯೇಷನ್ ರೋಡನ್ನು ಅವಶ್ಯಕವಾಗಿ ಮಾಡಿಕೊಡಬೇಕಾಗಿದೆ. ಇಲ್ಲದೇ ಹೋದರೆ ಜನ ಸಾಯುತ್ತಿರುತ್ತಾರೆ. ಇಲ್ಲಿ ಬಿಲ್ಡಿಂಗ್ ಕೊಲ್ಯಾಪ್ಸ್ ಆಗಿ ಜನ ಸತ್ತ ಹಾಗೆ ಅಲ್ಲಿ ವರ್ಷಕ್ಕೆ ೨೦೦-೩೦೦ ಜನರು ಸಾಯುತ್ತಾರೆ. ಆದ್ದರಿಂದ ಲೋಕೋಪಯೋಗಿ ಇಲಾಖೆಯವರು ಡೀವಿಯೇಷನ್ ರೋಡ್ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Stipendary Graduates

ಶ್ರೀ ಬಿ. ಎಸ್. ಯಡಿಯೂರಪ್ಪ —ಅಧ್ಯಕ್ಷರೆ, ಸ್ಟೈಫಂಡರಿ ಪದವೀಧರರು...

ಅಧ್ಯಕ್ಷರು.—ಇವೊತ್ತು ಮುಖ್ಯ ಮಂತ್ರಿಗಳ ಚರ್ಚೆ ಇದೆ. ಮುಖ್ಯ ಮಂತ್ರಿಗಳ ಡಿಮ್ಯಾಂಡ್ ಮೇಲೆ ತಾವು ಇದನ್ನು ಪ್ರಸ್ತಾಪ ಮಾಡಬಹುದು. ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ —ಅಧ್ಯಕ್ಷರೆ, ರಾಜ್ಯದ ಮೂಲೆ ಮೂಲೆಗಳಿಂದ ಸುಮಾರು ಏಳು ಸಾವಿರ ಜನ ಸ್ಟೈಫಂಡರಿ ಪದವೀಧರರು ಬಂದು ಇಲ್ಲಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರು ಪ್ರತಿ ತಿಂಗಳು ೨೦೦ ರೂಪಾಯಿಗಳನ್ನು ತೆಗೆದುಕೊಂಡೂ ಕೆಲಸ ಮಾಡುತ್ತಿದ್ದಾರೆ. ನಾಳೆ ನೀವು ಪ್ರೈಮರಿ ಸ್ಕೂಲ್ ಟೀಚರ್ ಅಪಾಯಿಂಟ್ ಮಾಡಿದರೆ ಅವರಿಗೆ ಹತ್ತು ರೂಪಾಯಿಗಳ ಕಡಿಮೆ ಮಾಡಿ ಪೂರ್ತಿ ಸಂಬಳ ಕೊಡುತ್ತೀರಿ. ಎಂದರೆ ಆಗ ಅವರು ೨೦೦-೬೦೦ ರೂಪಾಯಿಗಳ ಸಂಬಳ ತೆಗೆದು ಕೊಳ್ಳುತ್ತಾರೆ. ಇವೊತ್ತು ಗದ್ದೆಯಲ್ಲಿ ಕೆಲಸ ಮಾಡತಕ್ಕವನಿಗೆ ಕೂಲಿ ೧೫ ರೂಪಾಯಿಗಳನ್ನು ಒಂದು ದಿವಸಕ್ಕೆ ಕೊಡುತ್ತಾರೆ. ಈ ರೀತಿ ಇರುವಾಗ ಈ ಪದವೀಧರರು ತಿಂಗಳಿಗೆ ೨೦೦ ರೂಪಾಯಿಗಳನ್ನು ತೆಗೆದುಕೊಂಡು ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ? ಅವನು ಪಕ್ಕದ ಊರಿಗೆ ಹೋಗಿ ಬರಬೇಕು ಎಂದರೆ ಬಸ್ ಚಾರ್ಜಿಗೆ ಅರ್ಧ ಹೊರಟು ಹೋಗುತ್ತದೆ. ಈಗ ಅವರಲ್ಲಿ ೫೦ ಪರಸೆಂಟ್ ನೇಮಕ ಮಾಡಿಕೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೀರಿ. ಈಗ ಅವರಿಗೆ ಕನಿಷ್ಟ ತಕ್ಷಣದಿಂದ ೫೦೦ ರೂಪಾಯಿಗಳು ಆದರೂ ಸಂಬಳ ಕೊಡಿ. ನಿಮ್ಮ ಕಾನೂನು ಚೌಕಟ್ಟಿನಲ್ಲಿ ಯಾವರೀತಿ ಆಯ್ಕೆ ಮಾಡಬೇಕೆಂದು ಇದೆ, ಆ ರೀತಿ ಮಾಡಿ. ಇವೊತ್ತು ಹತ್ತು ಸಾವಿರ ಜನ ಇರತಕ್ಕವರು ನಾಳೆ ಇಪ್ಪತ್ತು ಸಾವಿರ ಜನ ಆಗುತ್ತಾರೆ, ಆ ಮೇಲೆ ರಾಜ್ಯದಲ್ಲಿ ಅಲೆಮ್ಮೋಲ ಕಲೆಮ್ಮೋಲವಾಗುತ್ತದೆ. ಆದ್ದರಿಂದ, ಕನಿಷ್ಟ ೫೦೦ ರೂಪಾಯಿಗಳ ಸಂಬಳ ಈ ತಿಂಗಳಿನಿಂದ ಕೊಡಲಿಕ್ಕೆ ಸರ್ಕಾರ ತೀರ್ಮಾನ ಮಾಡಬೇಕು.

ಅಧ್ಯಕ್ಷರು.—ಜನರಲ್ ಅಡ್ಮಿನಿಸ್ಟ್ರೇಷನ್ ಬಂದಾಗ ತಾವು ಇದನ್ನು ಹೇಳಿ.

ಶ್ರೀ ಪಂಪಾಪತಿ.—ಅಧ್ಯಕ್ಷರೆ, ನಮ್ಮ ನೋಟೀಸ್ ಸಿಕ್ಕಿದೆಯೇ ;

ಅಧ್ಯಕ್ಷರು.—ಮಾನ್ಯ ಸದಸ್ಯರು ರೂಲ್ ೬೨ರ ಕೆಳಗೆ ನೋಟೀಸ್ ಕೊಟ್ಟಿದ್ದೀರಿ. ಬ್ಯಾಲೆಟ್ ಆಗತಕ್ಕಂಥಾದ್ದು ತಮಗೆ ಗೊತ್ತಿದೆ.

ಶ್ರೀ ಪಂಪಾಪತಿ.—ಬ್ಯಾಲೆಟ್ ಹಾಕುವುದರಲ್ಲಿ ಅಪರಿಲ್ಲಾ ಸತ್ತುಹೋಗಿರುತ್ತಾರೆ.

ಅಧ್ಯಕ್ಷರು —ನಿಯಮವನ್ನು ನಾವು ಗಾಳಿಗೆ ತೂರೋಣವೇ ?

ಶ್ರೀ ಪಂಪಾಪತಿ.— ಅಲ್ಲಿ ಹೆಣ್ಣುಮಗಳನ್ನು ಆಸ್ಪತ್ರೆಗೆ ಹಾಕಿದ್ದಾರೆ. ಕೆಲವು ಸಂದರ್ಭದಲ್ಲಿ ನೀವು ನಿಯಮ ಉಲ್ಲಂಘನೆ ಮಾಡಬೇಕಾಗುತ್ತದೆ. ನಾವು ನಿಯಮ ಉಲ್ಲಂಘನೆ ಮಾಡಬೇಕಾಗುತ್ತದೆ.